ತಾರೀಖು 20ನೆ ಮಾರ್ಚಿ 1907.

ನಂ. 8629—ಸ್ಯಾನಿಟೆರಿ. 170-06—18, ಮೈಸೂರು ಡಿಸ್ಟ್ರಿಕ್ಟ್ಸ್ ಫೈಂಡರಾಕ್ಸ್ ಸಬ್ ತಾಲ್ಲೂಕಿನ ಮೇಲ್ಕೋಟೆಗೆ ಶ್ರೀ ರಾಮಾನುಜಾಚಾರ್ಯರವರ ತಿರುನಕ್ಷತ್ರ ಕಾಲದಲ್ಲಿ ಪ್ಲೇಗು ತಗ್ಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮರ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರಿಲ್ 9ನೆ ತಾರೀಖಿನಿಂದ ಅದೇ ತಿಂಗಳು 20ನೆ ತಾರೀಖಿನ ವರಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕೋಟೆ ತಿರುನಕ್ಷತ್ರಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8631—ಸ್ಯಾನಿಟೆರಿ 66-06—38, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟ್‌ನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9385—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96-ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಚಟ್ನಹಳ್ಳಿ	.... ಆಲೂರು ಸಬ್ ತಾಲ್ಲೂಕು.

ತಾರೀಖು 28ನೆ ಮಾರ್ಚಿ 1907.

ನಂ. 8967—ಸ್ಯಾನಿಟೆರಿ 21-06—109, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಸಪ್ತಸ್ಥಾನ ಉತ್ಸವ.	ತಂಜಾವೂರು ಬಳಿ ಇರುವ ತಿರುವಡಿ.	....	....	13—4—07	29—4—07	ಫರ್ಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 25ನೆ ಮಾರ್ಕಂ 307ನೆ ನಂಬರ್ ಮೆಮೊ ಪ್ರಕಾರ
				ಉಭಯ ದಿನಗಳೂ ಸೇರಿ.		
ಚಿತ್ರ ಉತ್ಸವ ಮತ್ತು ದನಗಳ ಸಂತೆ.	ಶಿವಲಾಪೇರಿ ಗ್ರಾಮ.	ತಿನವಲ್ಲಿ	ತಿನವಲ್ಲಿ	31—3—07	30—4—07	ಡಿಟೋ ನಂಬರ್ 301

ತಾರೀಖು 28ನೆ ಮಾರ್ಚಿ 1907.

ನಂ. 8968—ಸ್ಯಾನಿಟೆರಿ 21-06—110, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಯಾತ್ರೆ ಹೋಗುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಕಾಳಿಯಮ್ಮನ ಜಾತ್ರೆ.	ನಾತಪಟ್ಟಿ.	ಧರ್ಮಪುರಿ	ಸೇಲಂ	20—4—07	20—5—07	ಫರ್ಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 25ನೆ ಮಾರ್ಕಂ 303ನೆ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
ಬೈಟರಾಯ ಸ್ವಾಮಿ ರಥೋತ್ಸವ.	ಪಂಕಜಿಕೋಟೆ.	ಹೊಸೂರು	ಡಿಟೋ	10—4—07	28—4—07	ಡಿಟೋ ನಂಬರ್ 299
				ಉಭಯ ದಿನಗಳೂ ಸೇರಿ.		